# ಪತ್ರಿಕಾ ಪ್ರಕಟಣೆ

**ಕೋವಿಡ್-19ಗೆ ಸಂಬಂಧಿಸಿದ ರೋಗ ಲಕ್ಷಣಗಳಾದ ನೆಗಡಿ, ಕೆಮ್ಮು, ಜ್ವರ ILI/SARI ಔಷಧ ಖರೀದಿದಾರರ ವಿವರವನ್ನು "ಫಾರ್ಮ ಪೋರ್ಟ್"ನಲ್ಲಿ ಭರ್ತಿ ಮಾಡದ ಔಷಧ ಅಂಗಡಿಗಳ ಪರವಾನಗಿಗಳನ್ನು ಅಮಾನತ್ತುಗೊಳಿಸುವ ಬಗ್ಗೆ:**

ಸರ್ಕಾರವು ಆರೋಗ್ಯ ಅಗತ್ಯತೆಗಳನ್ನು ತಲುಪಿಸಲು ಮತ್ತು ಹೆಚ್ಚಿನ ಅಪಾಯದಲ್ಲಿರುವವರನ್ನು ರಕ್ಷಿಸಲು ಹಾಗೂ ಕೋರೋನಾ ಸಾಂಕ್ರಾಂಮಿಕ ರೋಗದ ಪ್ರಾಥಮಿಕ ಲಕ್ಷಣಗಳನ್ನು ಗುರುತಿಸಲು ಔಷಧ ಅಂಗಡಿಗಳಿಂದ ಖರೀದಿಸಿದ ರೋಗಿಯ ಮಾಹಿತಿಯು ಅತ್ಯಂತ ಮಹತ್ವದಾಗಿರುತ್ತದೆ.

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಇಲಾಖೆಯು "The Karnataka Epidemic Disease" (Covid-19) Regulation -2020ರಡಿ ಸುತ್ತೋಲೆ ಹೊರಡಿಸಿ ಎಲ್ಲಾ ಔಷಧ ವ್ಯಾಪಾರಸ್ಥರು, ಜ್ವರ, ನೆಗಡಿ, ಕೆಮ್ಮು ಮುಂತಾದ ಔಷಧ ಖರೀದಿದಾರರ ವಿವರಗಳನ್ನು https://pharma.karnataka.tech ವೆಬ್ ಅಪ್ಲಿಕೇಶನ್‌ನಲ್ಲಿ ಅಳವಡಿಸಲು ಸೂಚಿಸಿರುತ್ತದೆ. ಈ ಕುರಿತು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ರಾಜ್ಯದ ಎಲ್ಲಾ ಔಷಧ ಅಂಗಡಿಗಳಿಗೆ ಅವರವರ User ID & Password ಗಳ ಮಾಹಿತಿ ನೀಡಿರುತ್ತಾರೆ.

ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ರಾಜ್ಯದಲ್ಲಿರುವ ಔಷಧ ಅಂಗಡಿಗಳು https://pharma.karnataka.tech ವೆಬ್ ಅಪ್ಲಿಕೇಶನ್‌ನಲ್ಲಿ ಜ್ವರ, ನೆಗಡಿ, ಕೆಮ್ಮು ಮುಂತಾದ ಔಷಧಗಳ ಖರೀದಿದಾರರ ಹೆಸರು ಮತ್ತು ಮೊಬೈಲ್ ನಂ.ಗಳನ್ನು ಅಳವಡಿಸಲು ವಿಫಲವಾಗಿರುವ ಅಂಗಡಿಗಳನ್ನು ಪತ್ತೆ ಮಾಡಿರುತ್ತಾರೆ. ಸದರಿ ಸಂಸ್ಥೆಯವರು ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಅಡಿಯಲ್ಲಿ ನಿಯಮಾವಳಿಗಳು 1945ರ ನಿಯಮ 65(6) ಮತ್ತು ಕೋವಿಡ್-19 ರೆಗೂಲೇಷನ್ಸ್ 2020 ಅಡಿ ಉಲ್ಲಂಘನೆಗಳಿಗಾಗಿ ಅಂತಹ ಔಷಧ ಅಂಗಡಿಗಳ ಪರವಾನಗಿಗಳನ್ನು ನಿರ್ದಿಷ್ಟ ಅವಧಿಗೆ ಅಮಾನತ್ತುಗೊಳಿಸಿರುತ್ತಾರೆ. ಜಿಲ್ಲಾವಾರು ಅಮಾನತ್ತುಗೊಳಿಸಿದ ಔಷಧಿ ಅಂಗಡಿಗಳ ಸಂಖ್ಯೆಯು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಅಮಾನತ್ತುಗೊಂಡ ಔಷಧ ಅಂಗಡಿಗಳ ಸಂಖ್ಯೆ |
|---|---|---|
| 01 | ಕಲಬುರಗಿ | 70 |
| 02 | ಬೆಂಗಳೂರು | 03 |
| 03 | ಬೀದರ್ | 04 |
| 04 | ಬಿಜಾಪುರ | 15 |
| 05 | ಮೈಸೂರು | 04 |
| 06 | ರಾಯಚೂರು | 09 |
| 07 | ಬಾಗಲಕೋಟೆ | 05 |
| | ಒಟ್ಟು | **110** |

(ಅಮರೇಶ ತುಂಬಗಿ)
ಅಪರ ಔಷಧ ನಿಯಂತ್ರಕರು